# ಸಹಾಯಕ ಆಯುಕ್ತರ ನ್ಯಾಯಾಲಯ, ಬಳ್ಳಾರಿ

ದಿನಾಂಕ : 15 /09/ 2016

ಸಂ: ಕಂದಾಯ/ಅಪೀಲು/77/2015-16

ಉಪಸ್ಥಿತರು: **ಶ್ರೀಲೋಕೇಶ್.ಪಿ.ಎನ್.** (ಕ.ಆ.ಸೇ)

**ಸಹಾಯಕ ಆಯುಕ್ತರು, ಬಳ್ಳಾರಿ.**

| ವಾದಿಗಳು | ಪ್ರತಿವಾದಿಗಳು |
|---|---|
| 1.ಶ್ರೀಮತಿ ನಾಗಮ್ಮ ಗಂಡ ಲೇಟ್ ಮುರ್ತೀಪ್ಪಾ @ ಮುರ್ತೀಪ್ಪಾ ಗೌಡ,R/o ಸಾ॥ ತೊಂಡೆಹಾಳ್ ಗ್ರಾಮ, ಸಿರುಗುಪ್ಪ ತಾಲ್ಲೂಕು<br>(ಶ್ರೀ ಎ.ಮೋಹನ್ ರೆಡ್ಡಿ, ವಕೀಲರು,ಬಳ್ಳಾರಿ) | 1.ತಹಶೀಲ್ದಾರರು, ಸಿರುಗುಪ್ಪ<br>2.ಕಂದಾಯ ನಿರೀಕ್ಷಕರು,ಸಿರುಗುಪ್ಪ<br>3.ಗ್ರಾಮಲೆಕ್ಕಾಧಿಕಾರಿಗಳು,ತೊಂಡೆಹಾಳ್ |

**ದಾವಾ ಜಮೀನಿನ ವಿವರ :-**

| ತಾಲ್ಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ (ಎಕರೆಗಳಲ್ಲಿ) |
|---|---|---|---|
| ಸಿರುಗುಪ್ಪ | ತೊಂಡೆಹಾಳ್ | 81ಎ/1 | 1.22 |

--@@@--

ವಾದಿಯು ಅವರ ವಕೀಲರ ಮುಖಾಂತರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ಕಂದಾಯ ನಿರೀಕ್ಷಕರು,ಸಿರುಗುಪ್ಪ ಇವರ ಎಂ.ಆರ್.ನಂ.26/1979-80, ಆರ್.ಓ.ಆರ್.72/2014-15 ದಿನಾಂಕ:30.12.2014 ರ ಆದೇಶದ ವಿರುದ್ಧ ಈ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿಯನ್ನು ಸಲ್ಲಿಸುವಲ್ಲಿ ಆದ ವಿಳಂಬಕ್ಕೆ ಕಾಲಮಿತಿ ಕಾಯ್ದೆಯಡಿ ವಿಳಂಬ ಮನ್ನಾಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ವಿಳಂಬ ಮನ್ನಾ ಮಾಡಿ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿರುತ್ತದೆ. ನೈಸರ್ಗಿಕ ನ್ಯಾಯ ದೃಷ್ಟಿಯಿಂದ ಉಭಯ ಪಕ್ಷಗಾರರಿಗೂ ನೋಟೀಸಗಳನ್ನು ಕಳುಹಿಸಿ ದಿನಾಂಕ:01.09.2015, 22.12.2015, 14.06.2016,15.09.2016, ಗಳಂದು ಪ್ರಕರಣದ ವಿಚಾರಣೆಯನ್ನು ಕೈಗೊಳ್ಳಲಾಗಿರುತ್ತದೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದಿಗಳು ಈ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿ ಸಿರುಗುಪ್ಪ ತಾಲೂಕು ತೊಂಡೆಹಾಳ್ ಗ್ರಾಮದ ಸ.ನಂ.81ಎ/1 ವಿಸ್ತೀರ್ಣ:1.22 ಎಕರೆ ಜಮೀನಿಗೆ ಸಂಬಂಧಿಸಿದಂತೆ ಶ್ರೀಮತಿ ನಾಗಮ್ಮ ಇವರ ಗಂಡನ ಹೆಸರು ಪಹಣಿಯಲ್ಲಿ ಕಲಂ 9 ರಲ್ಲಿ ಮಾರೆಪ್ಪ ತಂದೆ ಈರಣ್ಣ ಎಂದು ತಪ್ಪಾಗಿ ನಮೂದಾಗಿರುವುದನ್ನು ಮೂರ್ತೆಪ್ಪಗೌಡ @ ಮೂರ್ತೆಪ್ಪ ತಂದೆ ಈರಣ್ಣ @ ವೀರನಗೌಡ ಎಂದು ಸರಿಪಡಿಸಿಕೊಡಲು ಮೇಲ್ಮನವಿ ಸಲ್ಲಿರುತ್ತಾರೆ.

ಕಾರಣ ಸದರಿ ಮೇಲ್ಮನವಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದಿಗಳು ಸಲ್ಲಿಸಿರುವ ದಾಖಲೆ ಪಹಣಿ ಮತ್ತು ತಹಶೀಲ್ದಾರರು,ಸಿರುಗುಪ್ಪ ಇವರು ಸಲ್ಲಿಸಿರುವ ವರದಿ,ಕಂದಾಯ ನಿರೀಕ್ಷಕರ,ಸಿರುಗುಪ್ಪ ಇವರ ಹೇಳಿಕೆ ಮಹಜರು ವರದಿ ಪರಿಶೀಲಿಸಲಾಗಿ, ಮಾರೆಪ್ಪ ತಂದೆ ಈರಣ್ಣ ಮತ್ತು ಮೂರ್ತೆಪ್ಪಗೌಡ @ ಮೂರ್ತೆಪ್ಪತಂದೆ ಈರಣ್ಣ @ ವೀರನಗೌಡ,ಇಬ್ಬರು ಒಂದೆ ವ್ಯಕ್ತಿಯಾಗಿದ್ದು,ಸದರಿ ಜಮೀನನ್ನು ಅಂದಾಜು 30 ವರ್ಷಗಳಿಂದ ಇವರ ಸ್ವಾಧೀನತೆಯಲ್ಲಿರುತ್ತದೆಂದು ಕಂದಾಯ ನಿರೀಕ್ಷಕರ,ಸಿರುಗುಪ್ಪ ಇವರ ವರದಿ ದಿನಾಂಕ:31.10.2015 ರಲ್ಲಿಯ ವರದಿಯಿಂದ ಕಂಡು ಬಂದಿರುತ್ತದೆ.ಮುಂದುವರೆದು ಈ ಪ್ರಕರಣವನ್ನು ಪರಿಶೀಲಿಸಲಾಗಿ.ಸದರಿ ವಿವಾದಾಸ್ಪದ ಪ್ರಕರಣವು ತಿದ್ದುಪಡಿ ವ್ಯಾಪ್ತಿಗೆ ಬರುವುದರಿಂದ ತಹಶೀಲ್ದಾರರು,ಸಿರುಗುಪ್ಪ ಇವರು ದಿನಾಂಕ: 10.12.2015ರ

ವರದಿಯನ್ನು ಆಧಾರಿಸಿ ವಾದಿಯ ಹೆಸರನ್ನು ತಿದ್ದುಪಡಿ ಮಾಡುವ ಕುರಿತಾಗಿ ಪ್ರಸ್ತಾವನೆಯನ್ನು ತಯಾರಿಸಿ ಈ ಪ್ರಾಧಿಕಾರದ ಅನುಮೋದನೆ ಪಡೆಯಲು ತಹಶೀಲ್ದಾರರು,ಸಿರುಗುಪ್ಪ ಇವರಿಗೆ ಆದೇಶಿಸುವ .ಈ ಕೆಳಕಂಡ ಆದೇಶ

**:: ಆದೇಶ ::**

**ವಾದಿಯ ಮೇಲ್ಮನವಿಯನ್ನು ಭಾಗಶಃ ಪುರಸ್ಕರಿಸಿದೆ:-**

ಪೀಠಿಕೆಯಲ್ಲಿ ವಿವರಿಸಿದ ಕಾರಣಗಳ ಹಿನ್ನೆಲೆಯಲ್ಲಿ ಸಿರುಗುಪ್ಪ ತಾಲ್ಲೂಕಿನ ತೊಂಡೆಹಾಳು ಗ್ರಾಮದ ಸ.ನಂ 81ಎ/1 ವಿಸ್ತೀರ್ಣ:1.22 ಎಕರೆ ಜಮೀನಿಗೆ ಸಂಬಂಧಿಸಿದಂತೆ ನಿಯಾಮಾನುಸಾರ ತಿದ್ದುಪಡಿ ಪ್ರಸ್ತಾವನೆಯನ್ನು ತಯಾರಿಸಿ ಈ ಪ್ರಾಧಿಕಾರದ ಅನುಮೋದನೆ ಪಡೆಯಲು ತಹಶೀಲ್ದಾರರು,ಸಿರುಗುಪ್ಪ ಇವರಿಗೆ ಆದೇಶಿಸಿದೆ.

ಈ ಆದೇಶವನ್ನು ಹೇಳಿ, ಬರೆಯಿಸಿ ತಪ್ಪುಗಳನ್ನು ತಿದ್ದಿ **ದಿನಾಂಕ:15.09.2016** ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

ಸಹಾಯಕ ಆಯುಕ್ತರು,
ಬಳ್ಳಾರಿ.